(40)

## ಕರ್ನಾಟಕ ಸರ್ಕಾರ

## ತಹಶೀಲ್ದಾರರು, ಸಿರುಗುಪ್ಪ ಇವರ ನ್ಯಾಯಾಲಯ, ಸಿರುಗುಪ್ಪ.

ಸಂ.ಕಂ/ಹಬ/ವಿವಾದ/08/2015-16 ದಿ:06-05-2016

| ವಾದಿಗಳು | ವಿರುದ್ದ | ಪ್ರತಿವಾದಿಗಳು |
|---|---|---|
| ಕರಿಲಿಂಗಪ್ಪ ತಂದೆ ಲೇಟ್ ಸಿದ್ದಪ್ಪ | | ಬಿ.ಸಿದ್ದಪ್ಪ |
| ಕೋಟೆಹಾಳು ಗ್ರಾಮ. | | ಕೋಟೆಹಾಳು ಗ್ರಾಮ. |

ದಾವಾ ಜಮೀನಿನ ವಿವರ

| ತಾಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ | ತರಹೆ |
|---|---|---|---|---|
| ಸಿರುಗುಪ್ಪ | ಕೋಟೆಹಾಳು | 129 ಪೈಕಿ | 1-22 | ಖುಷ್ಕಿ |

ಪೀಠಿಕೆ;-

ಸಿರುಗುಪ್ಪ ತಾಲೂಕು ಕೋಟೆಹಾಳು ಗ್ರಾಮದ ಸ,ನಂ. 129 ಪೈಕಿ ವಿ:1-22 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಪಕ್ಕೀರಮ್ಮ ಗಂಡ ಸಿದ್ದಪ್ಪ ಹೆಸರಿಗೆ ಪಟ್ಟಾ ಇದ್ದು, ಸದ್ರಿಯವರು ದಿ:05-06-1995 ರಂದು ಮರಣ ಹೊಂದಿರುವದರಿಂದ, ವಾರಸು ಮಕ್ಕಳು ದಿನಾಂಕ:15-11-2014 ರಂದು ಅರ್ಜಿದಾರರಾದ ಕರಿಲಿಂಗಪ್ಪ ತಂದೆ ಲೇಟ್ ಸಿದ್ದಪ್ಪ ಹೆಸರಿಗೆ ಹಕ್ಕು ಬದಲಾವಣೆ ಹೊಂದಲು ನೀಡಿದ ಒಪ್ಪಿಗೆ ಪತ್ರ ಪ್ರಕಾರ, ತಮ್ಮ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿದ್ದು, ಅದರಂತೆ ಅರ್ಜಿದಾರರ ಹೆಸರಿಗೆ ಹಕ್ಕುಬದಲಾವಣೆ ಮಾಡಲು, ತಾಲೂಕು ಕಛೇರಿ ಭೂಮಿ ಗಣಕೀಕರಣ ಶಾಖೆಯಿಂದ ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರಿಗೆ ಚೆಕ್‌ಲಿಸ್ಟ್‌ನ್ನು ಕಳುಹಿಸಲಾಗಿ ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 65 ರಂತೆ ನಮೂನೆ 21 ರ ನೋಟೀಸನ್ನು ಗ್ರಾ,ಲೆ. ಕೋಟೆಹಾಳು ಇವರು ಗ್ರಾಮದಲ್ಲಿ ಪ್ರಚುರಪಡಿಸಿರುತ್ತಾರೆ. ಸದ್ರಿ ಪ್ರಕರಣದಲ್ಲಿ ಹಕ್ಕು ಬದಲಾವಣೆ ಮಾಡುವ ಸಮಯದಲ್ಲಿ ನಿಗದಿತ ಅವಧಿಗೆ ಮುಂಚೆ ಬಿ.ಸಿದ್ದಪ್ಪ ಇವರು ಹಕ್ಕು ಬದಲಾವಣೆ ಮಾಡಬಾರದೆಂದು ದಿನಾಂಕ:30-03-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಂದಾಯ ನಿರೀಕ್ಷಕರು ಸಿರುಗುಪ್ಪ ಇವರು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಹ,ಬ.ಸಂಖ್ಯೆ:22/2014-15 ದಿ:------- ರ ಪ್ರಕಾರ ಈ ನ್ಯಾಯಾಲಯಕ್ಕೆ ಕಡತವನ್ನು ಸಲ್ಲಿಸಿರುತ್ತಾರೆ.

ಸದ್ರಿ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ನೋಂದಾಯಿಸಿಕೊಂಡು ಕರ್ನಾಟಕ ಭೂ-ಕಂದಾಯ ನಿಯಮಗಳು 1966 ರ ನಿಯಮ 67 ಮತ್ತು 43 ರಂತೆ ಪ್ರಕರಣದಲ್ಲಿನ ವಾದಿ ಮತ್ತು ಪ್ರತಿವಾದಿಗಳಿಗೆ ನೋಟೀಸುಗಳನ್ನು ಜಾರಿ ಮಾಡಿ ಪ್ರಕರಣದ ವಿಚಾರಣೆಯನ್ನು ದಿ:24-07-2015 ರಿಂದ 04-04-2016 ರ ವರೆಗೆ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ವಾದಿ, ಪ್ರತಿವಾದಿಗಳು ವಿಚಾರಣೆಗೆ ಹಾಜರಾಗಿರುತ್ತಾರೆ.

ಸದ್ರಿ ಪ್ರಕರಣದಲ್ಲಿ ದಾಖಲೆ ಪರಿಶೀಲಿಸಿ ವಾದಿ, ಪ್ರತಿವಾದಿಗಳ ವಾದ ಆಲಿಸಲಾಯಿತು. ಅರ್ಜಿದಾರರ ಹೇಳಿಕೆ ಪ್ರಕಾರ ಸದ್ರಿ ಜಮೀನು ತಮ್ಮ ತಾಯಿಯ ಹೆಸರಿಗೆ ಇದ್ದು, ಹಾಲಿ ತನ್ನ ತಾಯಿ ಮರಣ ಹೊಂದಿರುವುದರಿಂದ ಮತ್ತು ದಿನಾಂಕ:15-11-2014 ರಂದು ತನ್ನ ಸಹೋದರರು ನೀಡಿದ ಒಪ್ಪಿಗೆ ಪತ್ರ ಮೇರೆಗೆ ತನ್ನ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಕೋರಿರುತ್ತಾರೆ.

ಕರ್ನಾಟಕ ಸರ್ಕಾರ ಸಿರುಗುಪ್ಪ ತಹಶೀಲ್ದಾರರ ನ್ಯಾಯಾಲಯ

ಪ್ರತಿವಾದಿ ಹಾಗೂ ಇತರೆ ವಾರಸುದಾರರಾದ ದ್ಯಾವಪ್ಪ ಮತ್ತು ಅಮರೇಶಪ್ಪ ಇವರು ಸದ್ರಿ ಜಮೀನನ್ನು ವಾದಿ ಕರಿಲಿಂಗಪ್ಪ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ತಮಗೆ ಒಪ್ಪಿಗೆ ಇರುವುದಿಲ್ಲವೆಂದು ಮತ್ತು ಕಡತದಲ್ಲಿ ಹಾಜರುಪಡಿಸಿದ ಒಪ್ಪಿಗೆ ಪತ್ರಕ್ಕೆ ತಾವು ಸಹಿ ಮಾಡಿರುವುದಿಲ್ಲವೆಂದು ದಿ:04-04-2016 ರಂದು ವಿಚಾರಣೆ ಸಮಯದಲ್ಲಿ ತಿಳಿಸಿದ ಮೇರೆಗೆ ಮತ್ತು ಈ ಬಗ್ಗೆ ಪರಿಶೀಲಿಸಲಾಗಿ, ಸದ್ರಿ ಪ್ರಕರಣವು ಸಿವಿಲ್ ಸ್ವರೂಪವೆಂದು ಪರಿಗಣಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಲು ಹಾಗೂ ಸಿವಿಲ್ ನ್ಯಾಯಾಲಯ ಮೊರೆಹೋಗಿ ಪರಿಹಾರ ಕಂಡುಕೊಳ್ಳಲು ಸೂಚಿಸಿ ಈ ಕೆಳಕಂಡ ಆದೇಶ-

**ಸಂ.ಕಂ/ಹಬ/ವಿವಾದ/08/2015-16** **ದಿ:06-05-2016**

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳ ಹಿನ್ನೆಲೆ, ವಾಸ್ತವಾಂಶ ಹಾಗೂ ದಾಖಲೆಗಳನ್ವಯ ಸಿರುಗುಪ್ಪ ತಾಲೂಕು ಕೋಟೆಹಾಳು ಗ್ರಾಮದ ಸ.ನಂ. 129 ಪೈಕಿ ವಿ:1-22 ಎಕ್ರೆ ಜಮೀನು ಹಾಲಿ ಪಹಣಿ ಪ್ರಕಾರ ಪಕ್ಕೀರಮ್ಮ ಗಂಡ ಸಿದ್ದಪ್ಪ ಸದ್ರಿಯವರು ದಿ:05-06-1995 ರಂದು ಮರಣ ಹೊಂದಿರುವದರಿಂದ ವಾರಸು ಮಕ್ಕಳು ದಿನಾಂಕ:15-11-2014 ರಂದು ಅರ್ಜಿದಾರರಾದ ಕರಿಲಿಂಗಪ್ಪ ತಂದೆ ಲೇಟ್ ಸಿದ್ದಪ್ಪ ಹೆಸರಿಗೆ ಹಕ್ಕು ಬದಲಾವಣೆ ಹೊಂದಲು ನೀಡಿದ ಒಪ್ಪಿಗೆ ಪತ್ರಕ್ಕೆ ಪಟ್ಟಾದಾರರ ಇತರೆ ವಾರಸು ಮಕ್ಕಳು ತಾವು ಸಹಿ ಮಾಡಿರುವುದಿಲ್ಲವೆಂದು ಮತ್ತು ಸದ್ರಿ ಹಕ್ಕು ಬದಲಾವಣೆಗೆ ತಮ್ಮ ಒಪ್ಪಿಗೆ ಇರುವುದಿಲ್ಲವೆಂದು ತಿಳಿಸಿದ ಮೇರೆಗೆ, ಸದ್ರಿ ಪ್ರಕರಣವು ಸಿವಿಲ್ ಸ್ವರೂಪವೆಂದು ಪರಿಗಣಿಸಿ, ಸಿವಿಲ್ ನ್ಯಾಯಾಲಯ ಮೊರೆಹೋಗಿ ಪರಿಹಾರ ಕಂಡುಕೊಳ್ಳಲು ಉಭಯತರಿಗೂ ಸೂಚಿಸಿ, ಪ್ರಕರಣವನ್ನು ಈ ಹಂತದಲ್ಲಿ ಮುಕ್ತಾಯಗೊಳಿಸಲು ಮತ್ತು ಹಾಲಿ ಪಹಣಿಯಲ್ಲಿನ ನಮೂದುಗಳನ್ನು ಯಥಾರೀತಿ ಮುಂದುವರೆಸಲು ಆದೇಶಿಸಿದೆ.

ಈ ಆದೇಶ ಹೇಳಿ ಬರೆಯಿಸಿ, ಬೆರಳಚ್ಚು ಮಾಡಿ, ತಪ್ಪುಗಳನ್ನು ತಿದ್ದಿ ದಿ:06-05-2016 ರಂದು ತೆರೆದ ನ್ಯಾಯಾಲಯದಲ್ಲಿ ಬಹಿರಂಗವಾಗಿ ಘೋಷಿಸಿದೆ.

ತಹಶೀಲ್ದಾರರು,ಸಿರುಗುಪ್ಪ

ಗೆ,

1.ಭೂಮಿ ಗಣಕೀಕರಣ ಶಾಖೆಗೆ ಸೂಕ್ತ ಕ್ರಮಕ್ಕಾಗಿ
2.ವಾದಿ-ಪ್ರತಿವಾದಿಗಳಿಗೆ
3.ಕಛೇರಿ ಕಡತಕ್ಕೆ